ಶ್ರೀಮತಿ ಸುಮಾ ವಸಂತ್ (ಮುಜರಾಯಿ ಸಚಿವರು):

1. ಧಾರವಾಡ ನಗರಕ್ಕೆ 2001-02ನೇ ಸಾಲಿನಲ್ಲಿ 2 ಸಂಸ್ಥೆಗಳಿಗೆ ನವ ನಿರ್ಮಾಣ ಯೋಜನೆಯಡಿ ರೂ. 90,000-00 ಗಳನ್ನು ಬಿಡುಗಡೆ ಮಾಡಲಾಗಿದೆ. ಅನುದಾನ ಬಿಡುಗಡೆ ಮಾಡಲು ಯಾವುದೇ ಮಾನದಂಡ ಇರುವುದಿಲ್ಲ. ಕೇವಲ ಅವಶ್ಯಕತೆ ಮತ್ತು ಹಣದ ಲಭ್ಯತೆ ಆಧಾರದ ಮೇಲೆ ಹಣ ಬಿಡುಗಡೆ ಮಾಡಲಾಗುತ್ತದೆ.

2. ಧಾರವಾಡ ನಗರಕ್ಕೆ 2000-01ರಲ್ಲಿ ಅನುದಾನ ಮಂಜೂರಾಗಿಲ್ಲ. ಆದರೆ 2001-02ನೇ ಸಾಲಿನಲ್ಲಿ 2 ಸಂಸ್ಥೆಗಳಿಗೆ ಒಟ್ಟು ರೂ. 90 ಸಾವಿರ ಬಿಡುಗಡೆ ಮಾಡಲಾಗಿದೆ.

1. ಶ್ರೀ ಸತ್ಯನಾರಾಯಣ ಸ್ವಾಮಿ ದೇವಾಲಯ, ಹಲಗಣೇಶ ವಿದ್ಯಾ ಪೀಠ ಧಾರವಾಡ	ರೂ. 50,000-00
2. ಶ್ರೀ ಬಸವ ಕಲ್ಯಾಣ ಮಂಗಲ ಕಾರ್ಯಾಲಯ ಕಾಮನಕಟ್ಟೆ ಧಾರವಾಡ	ರೂ. 40,000-00
ಒಟ್ಟು	ರೂ. **90,000-00**

ಲೋಕೋಪಯೋಗಿ ರಸ್ತೆಗಳ ವಿವರ ಮತ್ತು ಗುಣಮಟ್ಟ

185(677) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಧಾರವಾಡ ಮಧ್ಯದಿಂದ ವಿವಿಧ ನಗರಗಳಿಗೆ ಸಂಪರ್ಕ ಹೊಂದುವ ಪ್ರಮುಖ ಎಲ್ಲಾ ಲೋಕೋಪಯೋಗಿ ರಸ್ತೆಗಳ ನಗರದಲ್ಲಿನ ಉದ್ದದ ಕಿಲೋ ಮೀಟರ್ ಮತ್ತು ಅಗಲದ ವಿವರ ತಿಳಿಸುವುದು?

ಆ) ಸದರಿ ಮಾರ್ಗಗಳ ರಸ್ತೆಗಳ ಗುಣಮಟ್ಟ ಸರಿಯಾಗಿ ಇಲ್ಲದೆ ಪ್ರತಿ ವರ್ಷವು ರಸ್ತೆ ಹಾಳಾಗುತ್ತಿರುವುದು ಸರ್ಕಾರ ಮನಗಂಡಿದೆಯೇ? ಹಾಗಾದರೆ ಅವುಗಳ ಬಗ್ಗೆ ದುರಸ್ತಿ ಮಾಡಲು ಯಾವ ಕ್ರಮ ತೆಗೆದುಕೊಳ್ಳಲಾಗುವುದು?

ಇ) ಲೋಕೋಪಯೋಗಿ ಇಲಾಖೆಯ ಪ್ರತಿ ಪ್ರಮುಖವಾದ ರಸ್ತೆಗಳ ಬದಿಯಲ್ಲಿ ಉತ್ತಮ ಗುಣಮಟ್ಟದ ಚರಂಡಿಗಳಿಲ್ಲದೆ ರಸ್ತೆಗಳು ಹಾಳಾಗುತ್ತಿರುವುದು ಕಾರಣವಲ್ಲವೇ?

ಈ) ಇಂತಹ ರಸ್ತೆಗಳಿಗೆ ಪ್ರತಿ ವರ್ಷ ಹಣ ಖರ್ಚು ಮಾಡಲು ಸರ್ಕಾರಕ್ಕೆ ಹೊರೆಯಾಗುವುದಿಲ್ಲವೆ?

ಉ) ಈ ರೀತಿಯಾಗಿ ರಸ್ತೆಗಳು ಹಾಳಾಗುತ್ತಿರುವುದನ್ನು ತಡೆಗಟ್ಟಲು ಸರ್ಕಾರ ಯಾವ ರೀತಿಯಲ್ಲಿ ಕ್ರಮವನ್ನು ಕೈಗೊಳ್ಳುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು)

ಅ) ಧಾರವಾಡ ಮಧ್ಯದಿಂದ ವಿವಿಧ ನಗರಗಳಿಗೆ ಸಂಪರ್ಕ ಹೊಂದುವ ಪ್ರಮುಖವಾದ ಎಲ್ಲಾ ಲೋಕೋಪಯೋಗಿ ರಸ್ತೆಗಳ ನಗರದಲ್ಲಿನ ಉದ್ದದ ಕಿಮೀ ಮತ್ತು ಅಗಲದ ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಅ) ಈ ರಸ್ತೆಗಳ ಗುಣಮಟ್ಟವು ಸರಿಯಾಗಿದ್ದು ಪ್ರತಿ ವರ್ಷ ದುರಸ್ತಿ ಅನುದಾನದಲ್ಲಿ ದುರಸ್ತಿ ಕೈಕೊಂಡು ರಸ್ತೆಗಳನ್ನು ಸುಸ್ಥಿತಿಯಲ್ಲಿ ಇಡಲಾಗಿದೆ. ರಾಜ್ಯ ಹೆದ್ದಾರಿಗಳನ್ನು ಕೆ.ಆರ್.ಡಿ.ಸಿ.ಎಲ್. ದಿಂದ 3 ವರ್ಷದ ಅವಧಿಯವರೆಗೆ ನಿರ್ವಹಣೆಗಾಗಿ ಮಾಡಲಾಗುತ್ತಿದೆ. ಧಾರವಾಡ ಕಲಘಟಗಿ ಜಿಲ್ಲಾ ಮುಖ್ಯ ರಸ್ತೆಯನ್ನು ಇತ್ತೀಚೆಗೆ ಪೂರ್ತಿಯಾಗಿ ಸುಧಾರಿಸಿದೆ.

ಇ) ಲೋಕೋಪಯೋಗಿ ಇಲಾಖೆ ರಸ್ತೆಗಳು ಹಾಳಾಗದಂತೆ ಅವಶ್ಯವಿದ್ದಲ್ಲಿ ರಸ್ತೆಗಳ ಪಕ್ಕದಲ್ಲಿ ಚರಂಡಿ ನಿರ್ಮಿಸಿದೆ.

ಈ) ರಸ್ತೆಗಳನ್ನು ನಿಯಮಿತವಾಗಿ ನಿರ್ವಹಣೆ ಮಾಡಬೇಕಾಗುವುದು ಹಾಗೂ ಅದರಂತೆ ನಿರ್ವಹಣೆ ಮಾಡಲಾಗುತ್ತಿದೆ.

ಉ) ರಸ್ತೆಗಳು ಹಾಳಾಗದಂತೆ ನೋಡಿಕೊಳ್ಳಲು ವಾರ್ಷಿಕ ನಿರ್ವಹಣೆ ಅನುದಾನದಲ್ಲಿ ಉಸ್ತುವಾರಿ ಮಾಡಲಾಗುತ್ತಿದೆ.

ಎಲ್ಎಕ್ಯೂ 677

ಅನುಬಂಧ

	ರಸ್ತೆಗಳ ಹೆಸರು	ಒಟ್ಟು ಉದ್ದ	ಆಗಲ		
			ಮೀಟರ್	ಮೀಟರ್	ಮೀಟರ್
1.	ಗಣೇಶಗುಡಿ-ಹಳಿಯಾಳ-ಧಾರವಾಡ ಹೆಬಸೂರ ರಾಜ್ಯ ಹೆದ್ದಾರಿ 28	9.83	-	6.98	2.85
2.	ಧಾರವಾಡ-ಅನಮೋಡ ರಾಜ್ಯ ಹೆಜ್ಜಾರಿ 34	8.00	-	5.00	3.00
3.	ಬಿಜಾಪುರ-ಧಾರವಾಡ ರಾಜ್ಯ ಹೆದ್ದಾರಿ 65	3.10	-	-	3.10
4.	ರೈಲ್ವೆ ಸ್ಟೇಶನ್ ಜಿಲ್ಲಾ ಮುಖ್ಯರಸ್ತೆ	1.30	-	-	1.30
5.	ಓಲ್ಡ ಕಂಟೋನ್ಮೆಂಟ್ ಜಿಲ್ಲಾ ಮುಖ್ಯ ರಸ್ತೆ	4.20	4.20	-	-
6.	ಲಿಂಕ್ ರೋಡ್ ಜಾಯಿನಿಂಗ್ ಪಿಬಿ ರೋಡ್ ಮತ್ತು ಧಾರವಾಡ ಹಳಿಯಾಳ ಜಿಲ್ಲಾ ಮುಖ್ಯ ರಸ್ತೆ	2.00	-	-	2.00
7.	ಲಿಂಕ್ ರೋಡ್ ಜಾಯಿನಿಂಗ್ ಸಪ್ತಾಪೂರ ಟು ಚಕ್ರಫಟ್ಟಾ ಜಿಲ್ಲಾ ಮುಖ್ಯ ರಸ್ತೆ	0.40	-	-	0.40
8.	ಧಾರವಾಡ ಕಲಘಟಗಿ ಜಿಲ್ಲಾ ಮುಖ್ಯ ರಸ್ತೆ	2.20	-	-	2.20
	ಒಟ್ಟು	31.02	4.20	11.98	14.85